ಕರ್ನಾಟಕ ಸರಕಾರ

# ಡಾ॥ ಗಂಗೂಬಾಯಿ ಹಾನಗಲ್ ಗುರುಕುಲ ಟ್ರಸ್ಟ್ (ರಿ), ಉಣಕಲ್, ಹುಬ್ಬಳ್ಳಿ–580032

E-mail: gangubaihangalgurukul@gmail.com Ph: +91-9448751210

ಕ್ರ: ಗುರುಕುಲ/ಆಡಳಿತ/ವಹಿ/20/2021-22, ದಿನಾಂಕ 27.06.2022

## -: ಆದೇಶ :-

ವಿಷಯ:- ಡಾ: ಗಂಗೂಬಾಯಿ ಹಾನಗಲ್ ಗುರುಕುಲ ಟ್ರಸ್ಟ (ರಿ) ಹುಬ್ಬಳ್ಳಿ ಇಲ್ಲಿ ಗೌರವಧನದ ಆಧಾರದ ಮೇಲೆ ತಬಲಾ ಸಾಥಿದಾರರನ್ನಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ:-1)ಈ ಕಚೇರಿಯ ಪ್ರಕಟಣೆ ದಿನಾಂಕ 30.12.2021
2)ಸಂದರ್ಶನ ಸಮೀತಿಯ ಕ್ರೂಢೀಕೃತ ವರದಿ ದಿನಾಂಕ 20.05.2022

---0---

ಡಾ: ಗಂಗೂಬಾಯಿ ಹಾನಗಲ್ ಗುರುಕುಲ ಟ್ರಸ್ಟ (ರಿ) ಹುಬ್ಬಳ್ಳಿ ಇಲ್ಲಿ ಖಾಲಿ ಇರುವ ಮೂರು ತಬಲಾ ಸಾಥಿದಾರರ ಹುದ್ದೆಗೆ ಮಾಸಿಕ ಗೌರವಧನದ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಬಗ್ಗೆ ದಿನಾಂಕ 30.12.2021 ರನ್ವಯ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಅದರನ್ವಯ 9 ಜನ ತಬಲಾ ಸಾಥಿದಾರರು ಅರ್ಜಿ ಸಲ್ಲಿಸಿದ್ದು ಅರ್ಹ 7 ಜನರಿಗೆ ಸಂದರ್ಶನಕ್ಕೆ ಆಹ್ವಾನಿಸಿ, ಈ ಕೆಳಕಂಡ ಮೂರು ಜನ ತಬಲಾ ಸಾಥಿದಾರರನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ತಾತ್ಕಾಲಿಕ ಮಾಸಿಕ ಗೌರವಧನ ರೂ. 17,000/- ಗಳ ಆಧಾರದ ಮೇಲೆ ನೇಮಿಸಿ, ಆದೇಶಿಸಲಾಗಿದೆ.

| ಅನಂ | ತಬಲಾ ಸಾಥಿದಾರರೆಂದು ಆಯ್ಕೆಯಾದವರ ಹೆಸರು | ಮಾಸಿಕ ಗೌರವ ಧನದ ಮೊತ್ತ | ತಾತ್ಕಾಲಿಕ ಗುತ್ತಿಗೆಯ ಅವಧಿ |
|---|---|---|---|
| 01 | ಶ್ರೀ ಶ್ರೀಧರ ಎಸ್, ಮಾಂಡ್ರೆ | ರೂ. 17,000/- ಯಾವುದೇ ಭತ್ಯೆ ಇರುವುದಿಲ್ಲ. | ದಿನಾಂಕ 01.06.2022 ರಿಂದ 31.05.2023ರ ವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ |
| 02 | ಡಾ: ಶ್ರೀಹರಿ ಎಸ್. ದಿಗ್ಗಾವಿ | | |
| 03 | ಶ್ರೀ ಕಿರಣ ಆರ್. ಯಾವಗಲ್ | | |

**ಷರತ್ತುಗಳು:-**

1. ತಮ್ಮ ಗೈರು ಹಾಜರಿಯ ದಿನದಂದು ಯಾವುದೇ ಗೌರವಧನವನ್ನು ನೀಡಲಾಗುವುದಿಲ್ಲ.
2. ತಾವು ತಿಂಗಳಿಗೆ ನಾಲ್ಕು ರಜೆಗಳನ್ನು ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು.
3. ಮೇಲ್ಕಾಣಿಸಿದಂತೆ ಗೌರವಧನವನ್ನು ಮಾತ್ರ ನೀಡಲಾಗುವುದು ಯಾವುದೇ ಭತ್ಯೆಗಳನ್ನು ನೀಡಲಾಗುವುದಿಲ್ಲ.
4. ಊಟ ಮತ್ತು ವಸತಿಯನ್ನು ತಾವೇ ಮಾಡಿಕೊಳ್ಳುವುದು.
5. ಸದರಿ ಹುದ್ದೆಯು ತಾತ್ಕಾಲಿಕವಾಗಿರುವುದರಿಂದ ಖಾಯಂ ನೇಮಕಾತಿಗೆ ಯಾವುದೇ ಹಕ್ಕುಳ್ಳುವರಾಗಿರುವುದಿಲ್ಲ.
6. ತಮ್ಮ ಕರ್ತವ್ಯ ಮತ್ತು ನಡುವಳಿಕೆಗಳು ಅಸಮರ್ಪಕವೆಂದು ಕಂಡು ಬಂದಲ್ಲಿ (ದುರ್ನಡತೆಗಳಿಗೆ) ಹಾಗೂ ಗುರುಕುಲಕ್ಕೆ ತಮ್ಮ ಸೇವೆಯ ಅವಶ್ಯಕತೆವಿಲ್ಲವೆಂದು ಕಂಡು ಬಂದಲ್ಲಿ ಯಾವುದೇ ನೋಟೀಸು/ ಮುನ್ಸೂಚನೇ ನೀಡದೇ ಗುರುಕುಲದಿಂದ ತೆಗೆದು ಹಾಕಲಾಗುವುದು.
7. ತಮ್ಮ ಸೇವಾ ಅವಧಿಯಲ್ಲಿ ಗುರುಕುಲಕ್ಕೆ ಆರ್ಥಿಕ ಅಥವಾ ಇನ್ನಾವುದೇ ನಷ್ಟವಾದಲ್ಲಿ ತಮ್ಮ ಗೌರವಧನದಿಂದ ಕಟಾಯಿಸಲಾಗುವುದು.
8. ಮೇಲಾಧಿಕಾರಿಗಳು/ ಗುರುಜಿಗಳು ನಿಗದಿಪಡಿಸಿದ ಸಮಯಕ್ಕೆ ತಬಲಾ ಸಾಥಿದಾರರ ಕಾರ್ಯ ನಿರ್ವಹಿಸುವುದು.

ಜಿಲ್ಲಾಧಿಕಾರಿಗಳು ವ ಕಾರ್ಯಾಧ್ಯಕ್ಷರು
ಡಾ॥ ಗಂಗೂಬಾಯಿ ಹಾನಗಲ್ ಗುರುಕುಲ
ಟ್ರಸ್ಟ (ರಿ). ಉಣಕಲ್, ಹುಬ್ಬಳ್ಳಿ.

**ಪ್ರತಿಗಳು:-**

1)ಮಾನ್ಯ ಪ್ರಾದೇಶಿಕ ಆಯುಕ್ತರು, ಬೆಳಗಾವಿ ಇವರಿಗೆ ಮಾಹಿತಿಗಾಗಿ ಗೌರವಪೂರ್ವಕ ಸಲ್ಲಿಸಿದೆ.
2)ಗುರುಕುಲದ ಎಲ್ಲ ಗುರೂಜಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
3)ಸಂಬಂಧಿಸಿದ ಎಲ್ಲ ತಬಲಾ ಸಾಥಿದಾರರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
4)ಕಚೇರಿ ಕಡತಕ್ಕೆ.